ನಿನ್ನ ಸಹೋದರನಿಗೆ ಸಹಾಯ ಮಾಡು, ಅವನು ಅನ್ಯಾಯ ಮಾಡುವವನಾಗಿದ್ದರೂ ಅಥವಾ ಅನ್ಯಾಯಕ್ಕೊಳಗಾದವನಾಗಿದ್ದರೂ ಸಹ

ಅನಸ್ ಇಬ್ನ್ ಮಾಲಿಕ್ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ: ಅಲ್ಲಾಹನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ನಿನ್ನ ಸಹೋದರನಿಗೆ ಸಹಾಯ ಮಾಡು, ಅವನು ಅನ್ಯಾಯ ಮಾಡುವವನಾಗಿದ್ದರೂ ಅಥವಾ ಅನ್ಯಾಯಕ್ಕೊಳಗಾದವನಾಗಿದ್ದರೂ ಸಹ". ಆಗ ಒಬ್ಬ ವ್ಯಕ್ತಿ ಹೇಳಿದರು: "ಓ ಅಲ್ಲಾಹನ ಸಂದೇಶವಾಹಕರೇ, ಅವನು ಅನ್ಯಾಯಕ್ಕೊಳಗಾದವನಾಗಿದ್ದರೆ ನಾನು ಅವನಿಗೆ ಸಹಾಯ ಮಾಡುತ್ತೇನೆ.
ಆದರೆ, ಅವನು ಅನ್ಯಾಯ ಮಾಡುವವನಾಗಿದ್ದರೆ ನಾನು ಅವನಿಗೆ ಹೇಗೆ ಸಹಾಯ ಮಾಡಲಿ ಎಂದು ತಿಳಿಸಿರಿ?"
ಅವರು (ಪ್ರವಾದಿ) ಹೇಳಿದರು: "ನೀನು ಅವನನ್ನು ಅನ್ಯಾಯದಿಂದ ತಡೆಯುವುದು, ಖಂಡಿತವಾಗಿಯೂ, ಅದೇ ಅವನಿಗೆ ಮಾಡುವ ಸಹಾಯವಾಗಿದೆ". [صحيح] [رواه البخاري]

ಮುಸ್ಲಿಂ ವ್ಯಕ್ತಿಯು ತನ್ನ ಸಹೋದರನಾದ ಮುಸ್ಲಿಮನಿಗೆ, ಅವನು ಅನ್ಯಾಯ ಮಾಡುವವನಾಗಿದ್ದರೂ ಅಥವಾ ಅನ್ಯಾಯಕ್ಕೊಳಗಾದವನಾಗಿದ್ದರೂ, ಸಹಾಯ ಮಾಡಬೇಕೆಂದು ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಆದೇಶಿಸಿದರು. ಆಗ ಒಬ್ಬ ವ್ಯಕ್ತಿ ಹೇಳಿದರು: ಓ ಅಲ್ಲಾಹನ ಸಂದೇಶವಾಹಕರೇ, ಅವನು ಅನ್ಯಾಯಕ್ಕೊಳಗಾದವನಾಗಿದ್ದರೆ, ಅವನ ಮೇಲಿನ ಅನ್ಯಾಯವನ್ನು ದೂರ ಮಾಡುವ ಮೂಲಕ ನಾನು ಅವನಿಗೆ ಸಹಾಯ ಮಾಡುತ್ತೇನೆ. ಆದರೆ, ಅವನು ಅನ್ಯಾಯ ಮಾಡುವವನಾಗಿದ್ದರೆ ನಾನು ಅವನಿಗೆ ಸಹಾಯ ಮಾಡುವುದು ಹೇಗೆ ಎಂದು ತಿಳಿಸಿರಿ? ಅವರು (ಪ್ರವಾದಿ) ಹೇಳಿದರು: ನೀನು ಅವನನ್ನು ತಡೆಯುವುದು, ಅವನ ಕೈಗಳನ್ನು ಹಿಡಿಯುವುದು, ಅವನನ್ನು ತಡೆಗಟ್ಟುವುದು ಮತ್ತು ಅನ್ಯಾಯದಿಂದ ಅವನನ್ನು ದೂರವಿರಿಸುವುದು. ಖಂಡಿತವಾಗಿಯೂ, ಇದು ಅವನ ಪೈಶಾಚಿಕತೆ ಮತ್ತು ಕೆಡುಕನ್ನು ಪ್ರೇರೇಪಿಸುವ ಅವನ ಆತ್ಮದ ವಿರುದ್ಧ ಅವನಿಗೆ ಮಾಡುವ ಸಹಾಯವಾಗಿದೆ.

http://www.sunnah.global/hadeeth/kn/show/4236